ಕರ್ನಾಟಕ ಸರ್ಕಾರ (ಸಿ.ಆರ್.ಪಿ.೬೭)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ ೫೭)
ನಮೂನೆ ಸಂಖ್ಯೆ ೪
(ಸಿವಿಲ್)

## ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

**ಎಸ್.ಸಿ.ಸಂಖ್ಯೆ: ೫೪/೨೦೦೮**

**ಪ್ರಾಸಾ ೦೩**

**ಚಾಸಾ ೦೬**

ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕಃ ೦೩/೧೨/೨೦೧೬

**ಸಾಕ್ಷಿಯ ಹೆಸರು** : ಶ್ರೀಮತಿ ಎಸ್.ಲಲಿತಮ್ಮ

**ತಂದೆ/ಗಂಡನ ಹೆಸರು** : ದಿವಂಗತ ವೆಂಕಟೇಶ್

**ವಯಸ್ಸು** : ೪೫ ವರ್ಷ

**ಉದ್ಯೋಗ** : ಸಹಾಯಕ ಮಹಿಳಾ ಪೋಲಿಸ್ ಉಪನಿರೀಕ್ಷಕರು, ಗೌರಿಬಿದನೂರು ನಗರಠಾಣೆ

**ವಾಸಸ್ಥಳ** : ಗೌರಿಬಿದನೂರು

**ಮುಖ್ಯ ವಿಚಾರಣೆ:** ಸರ್ಕಾರಿ ಅಭಿಯೋಜಕರಿಂದ ಃ- ಅಫರಾಧ ಪ್ರಕ್ರಿಯಾ ಸಂಹಿತೆ ೨೯೯ ರ ಅಡಿಯಲ್ಲಿ

೧೯೯೪ ರಿಂದ ೨೦೦೪ ರವರೆಗೆ ಗೌರಿಬಿದನೂರು ನಗರಠಾಣೆ ಮಹಿಳಾ ಪೋಲಿಸ್ ಪೇದೆ ೬೭೯ ಎಂದು ಕೆಲಸ ಮಾಡಿದ್ದೇನೆ.

ದಿಃ ೨೦.೦೩.೨೦೦೨ ರಂದು ನಿಸ್ತಂತು ಕೆಲಸ ನಿರ್ವಹಿಸಲು ಬೆಳಿಗ್ಗೆ ೭-೦೦ ರಿಂದ ರಾತ್ರಿ ೮-೦೦ ವರೆಗೆ ನನ್ನನ್ನು ನೇಮಿಸಲಾಗಿತ್ತು, ಆ ದಿನ ಬೆಳಿಗ್ಗೆ ೧೦-೪೫ ಕ್ಕೆ

ಗೌರಿಬಿದನೂರು ವೃತ್ತ ನಿರೀಕ್ಷಕರು ನಿಸ್ತಂತು ಸಂದೇಶದ ಮೂಲಕ ಬಿಳಿ ಮೌಂಟೇಸ್ ಕಾರ್ ಸಂಖ್ಯೆಃ ಕೆಎ-೦೨-ಎಂಎ-೮೦೦೮ ವಾಹನ ಬರುತ್ತಿದ್ದೆ ಅದನ್ನು ನಿಲ್ಲಿಸಲು ಸೂಚಿಸಿದರು. ಸದರಿ ವಿಷಯವನ್ನು ನಾನು ಠಾಣಾಧಿಕಾರಿಗೆ ಮತ್ತು ಪಹರೆ ಪೋಲಿಸ್ ಪೇದೆಗಳಿಗೆ ತಿಳಿಸಿದ್ದೇನೆ.

ಸದರಿ ಕಾರನ್ನು ನಿಲ್ಲಿಸಲು ಠಾಣೆಯ ಮುಂದೆ ಹೋದಾಗ ಸದರಿ ಕಾರು ನಿಲ್ಲುವಂತೆ ಸಾವಕಾಶವಾಗಿ ಬಂದಂತೆ ಮಾಡಿ ವೇಗವನ್ನು ಒಮ್ಮೆಲೆ ಹೆಚ್ಚಿಸಿ ಠಾಣಾ ಪಹರೆ ಪೇದೆ ೨೯೩ ಆಂಜಿನಪ್ಪ ಇವರಿಗೆ ಡಿಕ್ಕಿ ಹೊಡೆಸಿ ಕಾರನ್ನು ಬಿಟ್ಟುಕೊಂಡು ಹೋದರು. ಸದರಿ ಆಂಜಿನಪ್ಪ ಕೆಳಗೆ ಬಿದ್ದರು. ಅಲ್ಲಿ ಇದ್ದ ಸಾರ್ವಜನಿಕರಾದ ನಾಗರಾಜ್ ಸದರಿ ಆಂಜಿನಪ್ಪನನ್ನು ಆಟೋದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಂತರ ವೃತ್ತನಿರೀಕ್ಷಕರು ಸದರಿ ಕಾರನ್ನು ಒಂದು ಖಾಸಗಿ ವಾಹನದಲ್ಲಿ ಬೆನ್ನಟ್ಟಿಕೊಂಡು ಹೋದರು. ಸದರಿ ಕಾರನ್ನು ಮಂಚೇನಹಳ್ಳಿಯಲ್ಲಿ ಹತ್ತಿರ ಹಿಡಿದಿದ್ದಾರೆ ಎಂದು ಗೊತ್ತಾಯಿತು. ಈ ಬಗ್ಗೆ ನಾನು ಹೇಳಿಕೆ ಕೊಟ್ಟಿದ್ದೇನೆ. ಅಫರಾದ ಪ್ರಕ್ರಿಯಾ ಸಂಹಿತೆ ೨೯೯ ರ ಅಡಿಯಲ್ಲಿ ಸಾಕ್ಷಿಯನ್ನು ಮಾಡಿಕೊಂಡ ಕಾರಣ ಪಾಟೀಸವಾಲು ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಗಾರ್ತಿಯಿಂದ ಬೆರಳಚ್ಚು ಮಾಡಿಸಲಾಯಿತು)**

ಓದಿ ಹೇ ಕೇ ಸರಿ ಇದೆ

**ಒಂದನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**